

# ಕುಸುಮ ಜಾಜಿಯ ಸಂಸಾರ

## ಚಿತ್ರ – ಬರಹ: ಭರತ ಕಲ್ಯಾಣ

ಆಗೋ ಅಲ್ಲಿ ನೋಡು. ಕಪ್ಪು ಬಿಳಿ ಚಿತ್ತಾರದ ಚಿಟ್ಟೆ. ಇಲ್ಲಿದೆ ಹೊಳೆಹೊಳೆವ ಬಣ್ಣದ ದುಂಬಿ. ಹೊಂಬಣ್ಣದ ಹೂ ಕಳಶಕ್ಕೆ ನವಿರಾಗಿ ಸೊಂಡಿಲು ತೂರಿಸುವ ಮದುವಣಗಿತ್ತಿ ಇಲ್ಲಿ!

ಆಕೆ ಇಲ್ಲಿಗೆ ಬಂದದ್ದು ಸುಮಾರು ಕಿಲೋಮೀಟರ್ ದೂರದಿಂದ. ತಿಳಿಯಲಿಲ್ಲವೇ ಆಕೆ ಯಾರೆಂದು? ಚಿತ್ರ ಕಂಡಿರಲ್ಲ? ಜೇನು ಕುಟುಂಬ ಒಂದರ ಕೆಲಸಗಾತಿ. ಅಂದು ರವಿವಾರ. ಬಿಡುವಿನ ದಿನವೆಂದು ತಡವಾಗಿ ಎದ್ದ ನಾನು ಕುಸುಮಜಾಜಿ ಗಿಡದ ಬಳಿ ಬಂದಾಗ ಇವರೆಲ್ಲ ಅಲ್ಲಿ ನೆರೆದೇ ಬಿಟ್ಟಿದ್ದರು. ಆಕೇಸಿಯ ಫಾರ್ನೇಸಿಯಾನ ಎಂಬ ದ್ವಿನಾಮದ ಈ ಕುಸುಮ ಜಾಜಿಗೆ ಕೆಲವರು ಕಸ್ತೂರಿ ಜಾಲಿ ಎಂಬರು. ಅದೇನು ಅಂದ ಅದೇನು ಚಂದ ನೋಡಿದಿರ? ಹೂವಿನ ನಸುಕಂಪು ಹಿಂದೆ ಅತ್ತರಿಗೆ ಹೆಸರು ಮಾಡಿತ್ತು. ಇಂದು ಎಲ್ಲವೂ ಕೃತಕ. ಹಾಗಾಗಿ ಅಲ್ಲೊಂದಿಲ್ಲೊಂದು ಗಿಡ ಮಾತ್ರ ಉಳಿದಿದೆ. ಹೂ ಕಳಿತು ಕಾಯಾಗಲು, ಗಿಡ ಉಳಿಯಲು ಹತ್ತಿರ ಸುಳಿವ ಕೀಟ ಸಂಸಾರವೇ ಕಾರಣ. ಮಹಾನಗರಿಯ ಮೂಲೆ ಮೂಲೆಯ ತೋಟದಂಚಿನಲ್ಲಿ ಇಂಥ ಗಿಡ ಆಸರೆ ಬೇಡುತ್ತಿವೆ. ನೀಡಬಲ್ಲಿರಾ ನೀವು?

***